ಶ್ರೀ ಎಸ್. ಬಂಗಾರಪ್ಪ.—೨೨೪ ಜನ ಸದಸ್ಯರಿಗೆ ಇದರ ಪ್ರತಿಗಳನ್ನು ಕಳುಹಿಸಿಕೊಡಲು ಈಗ ಸಾಧ್ಯವಾಗದಿದ್ದರೆ ಈಗಿರುವ ಪ್ರತಿಗಳನ್ನೇ ಈ ದಿನ ಮಾನ್ಯ ಸದಸ್ಯರುಗಳಿಗೆ ನಾಳೆಯ ಅಜೆಂಡಾವನ್ನು ಕಳುಹಿಸಿಕೊಡುವಾಗ ಕಳುಹಿಸಿಕೊಡಲಿ. ನಂತರ ಉಳಿದವರಿಗೆ ಕಳುಹಿಸಿಕೊಡಲಿ. ಈ ರೀತಿ ಮಾಡಿದರೆ ನಾವು ಮುಂದಿನವಾರ ಇಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಅಧ್ಯಕ್ಷರು.—ಆಗಬಹುದು.

ಶಾಸನಾ ರಚನಾ ಕಲಾಪಗಳು

ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕ, ೧೯೮೬

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕವನ್ನು.....

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುವುದಕ್ಕೆ ನಮ್ಮ ಆಕ್ಷೇಪಣೆ ಇದೆ. ಏಕೆಂದರೆ, ಇದಕ್ಕೆ ಸಂಬಂಧಪಟ್ಟಂತೆ ನಮಗೆ ಫೈನಾನ್ಸಿಯಲ್ ಮೆಮೊರಾಂಡಮ್‌ನ್ನು ಇನ್ನೂ ಕೊಟ್ಟಿಲ್ಲ.

ಅಧ್ಯಕ್ಷರು.—ಕೊಟ್ಟಿದ್ದಾರೆ.

SRI M. VEERAPPA MOILY.—Yes, but it cannot be called as a Financial Memorandum. ಈಗಲೂ ನಮಗೆ ಫೈನಾನ್ಸಿಯಲ್ ಮೆಮೊರಾಂಡಮನ್ನು ಕೊಟ್ಟಿಲ್ಲ. ಕೇವಲ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. But this will not constitute a Financial Memorandum. This is a betrayal of the House. ಈ ಫೈನಾನ್ಸಿಯಲ್ ಮೆಮೊರಾಂಡಮ್‌ನಲ್ಲಿ ಏನು ಬರೆದಿದ್ದಾರೆಂದರೆ :—

> Sub-clause (4) of Clause 13 of the Bill provides for the creation of a Legal Cell in the Directorate of Municipal Administration. The composition and strength of the Legal Cell is yet to be determined by Rules. Some additional expenditure will be involved. It is not possible to finally determine it before the Rules are prescribed.

ಇಲ್ಲಿ "Some additional expenditure will be involved." ಎಂದು ಹೇಳಿದರೆ what is the implication? ಅಸೆಸ್‌ಮೆಂಟ್ ಎಷ್ಟಾಗುತ್ತದೆಂಬುದನ್ನು ನಮಗೆ ತಿಳಿಸದಿದ್ದರೆ ಈ ವಿಧೇಯಕವನ್ನು ಇಲ್ಲಿ ಮಂಡಿಸಿ ಏನು ಪ್ರಯೋಜನ? ನಮಗೆ ಇಂತಹ ಒಂದು Financial Memorandum ಕೊಟ್ಟರೆ it is cheating of the House.....ಆಗುತ್ತದೆ. ಈ ಮಾತನ್ನು ಹೇಳಿದರೆ ಮಾನ್ಯ ಮಂತ್ರಿಗಳಿಗೆ ಬಿಟ್ಟು ಬರುತ್ತದೆ. ನಮಗೆ ಈ ತರಹ ಫೈನಾನ್ಸಿಯಲ್ ಮೆಮೊರಾಂಡಮನ್ನು ಕೊಟ್ಟರೆ ಹೇಗೆ?

ಶ್ರೀ ಎಂ. ಎಸ್. ಕೃಷ್ಣನ್.—ನಮಗೆ ಎಲ್ಲಾ ವಿವರಗಳನ್ನು ಸಹ ಕೊಡಬೇಕಾಗುತ್ತದೆ. ಅದನ್ನು ಬಿಟ್ಟು ಈ ತರಹ ಕೊಟ್ಟರೆ ಹೇಗೆ? ಇದು ಫೈನಾನ್ಸಿಯಲ್ ಮೆಮೊರಾಂಡಮ್ ಆಗುವುದಿಲ್ಲ. Legally it is not correct. I think, he should gi e an explanatory note.

† ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಇಂತಹ ವಿಧೇಯಕಗಳನ್ನು ಮಂಡಿಸುವಾಗ ಫೈನಾನ್ಸಿಯಲ್ ಮೆಮೊರಾಂಡಮ್ ಇರಬೇಕು ಎಂಬುದನ್ನು ನಾವೆಲ್ಲರೂ ಒಪ್ಪಿದ್ದೇವೆ. ಆದರೆ ಫೈನಾನ್ಸಿಯಲ್ ಮೆಮೊರಾಂಡಮ್ ಯಾವರೀತಿ ಇರಬೇಕು ಎಂಬುದನ್ನು ಇವರು ತಿಳಿದುಕೊಂಡಂತೆ ಕಾಣುವುದಿಲ್ಲ. ಈ ಬಗ್ಗೆ ಇವರು ಇಲ್ಲಿ ಕೊಟ್ಟಿರುವ ವಿವರಣೆ ಸಾಲದು. ನಾವು ಯಾವುದೇ ಕಾನೂನು ಮಾಡಿದರೆ, ಅದರಿಂದ ಬರುವಂಥ ಉತ್ಪಾದನೆ ಎಷ್ಟು ಮತ್ತು ಖರ್ಚು ಎಷ್ಟು ಬರುತ್ತದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಆದರೆ ಮಾನ್ಯ ಮಂತ್ರಿಗಳು ಈ ವಿವರಣೆಯನ್ನು ನಮಗೆ ಒದಗಿಸಿಲ್ಲ. Expected or anticipated income and Expenditure should be given. Some additional expenditure will be involved. Whether it is within the budgeted amount or outside the budgetted amount. It can't be considered as Financial Memorandum. ಆದ್ದರಿಂದ ಮಾನ್ಯ ಮಂತ್ರಿಗಳು ಈ ಸಭೆಯನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಈ ಸಂಬಂಧದಲ್ಲಿ ಮಾನ್ಯ ಪೊಯ್ಲಿ ಅವರು it is cheating of the house ಎಂದು ಏನು ಹೇಳಿದರು, ಅದು ಸರಿಯಾಗಿದೆ.

ಶ್ರೀ ಎಂ. ವೀರಪ್ಪ ಪೊಯಿಲಿ.—ಮಾನ್ಯ ಅಧ್ಯಕ್ಷರೇ, ನಾವು ಇರುವಂಥ ನಿಯಮಗಳನ್ನು ಬಿಟ್ಟು ಇಂತಹ ವಿಧೇಯಕಗಳನ್ನು ಇಲ್ಲಿ ಪಾಸ್ ಮಾಡುವುದಕ್ಕಾಗುವುದಿಲ್ಲ. To supplement I quote page 451 of the Practice and Procedure of Parliament.

> "A bill involving expenditure from the Consolidated Fund of India is required to be accompanied by a Financial Memorandum which outlines the objects on which the expenditure is likely to be involved. The Memorandum has to invite particular attention to the clauses involving expenditure and also to give an estimate of the recurring and non-recurring expenditure involved in case the bill is passed into law. Such clauses or provisions in the Bill are printed in thick type or in italics. Where, however, a clause in a Bill involving expenditure has not been printed in thick type or in italics, the Speaker may permit a member in charge of the Bill to bring such clauses to the notice of the House.
>
> If the financial memorandum relating to a Government Bill is found to be in complete, the Minister concerned is asked to furnish all the details and copies of the revised memorandum are circulated separately to Members for their information."

The financial Memorandum has got to be printed in thick type or in italics. This will have to be printed. To that extent, the books is so meticulous and objective. So, they have to bring forward revised Financial Memorandum with all details.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಇಪ್ಪೊತ್ತು ಈ ಸರ್ಕಾರದವರು ವಾಟರ್ ಸೆಸ್ ಎಂದು ವಸೂಲಿ ಮಾಡಲು ಹೊರಟಿದ್ದಾರೆ. ಆಸ್ತಿ ತೆರಿಗೆಯ ಜೊತೆಗೆ ಇದನ್ನು ಸಹ ವಸೂಲಿ ಮಾಡಿ, ಬಂದಂಥ ಹಣವನ್ನು ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಬೋರ್ಡಿಗೆ ಕೊಡ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಲಾಗುವುದೆಂದು ಇಲ್ಲಿ ಹೇಳಿದ್ದಾರೆ. ಈಗ ನಮ್ಮ ರಾಜ್ಯದಲ್ಲಿ ಒಟ್ಟು ಎಷ್ಟು ಮುನಿಸಿಪಾಲಿಟಿಗಳಿವೆ, ಎಲ್ಲಾ ಕಡೆಗೂ ನೀರು ಸರಬರಾಜು ಮಾಡಲು ಎಷ್ಟು ಹಣ ಬೇಕಾಗುತ್ತದೆ ಮತ್ತು ಈ ಒಂದು ಸೆಸ್ ನಿಂದ ಎಷ್ಟು ಹಣ ವಸೂಲಿ ಆಗುತ್ತದೆ, ಸರ್ಕಾರದವರು ಈ ಬಾಬಿಗೆ ಎಷ್ಟು ಹಣ ಒದಗಿಸಿದ್ದಾರೆಂಬ ವಿವರಗಳು ನಮಗೆ ಬೇಕಾಗುತ್ತದೆ. ೧೯೮೫ರಲ್ಲಿ ಈ ಒಂದು ಕೆಲಸಕ್ಕಾಗಿ ನಾವು ಒಂದು ಕೋಟಿ ರೂಪಾಯಿಗಳನ್ನು ಒದಗಿಸಿದ್ದೆವು. ಈಗ ನೀವು ಎಷ್ಟು ಒದಗಿಸಿದ್ದೀರಿ ಮತ್ತು ಎಷ್ಟು ಕೊರತೆ ಬಿದ್ದಿದೆ ಎಂಬ ವಿವರಗಳನ್ನು ಇಂತಹ ವಿಧೇಯಕಗಳನ್ನು ತಂದಾಗ ನಮಗೆ ತಿಳಿಸಬೇಕಾಗುತ್ತದೆ. ನೀರಿನ ಮೇಲೆ ಟ್ಯಾಕ್ಸ್‌ನ್ನು ಈ ಸರ್ಕಾರ ಪ್ರಪ್ರಥಮವಾಗಿ ಹಾಕುತ್ತಿದೆ. ಈ ಒಂದು ಕೀರ್ತಿ ಈ ಸರ್ಕಾರಕ್ಕೆ ಹೋಗಬೇಕು. ಇದರಿಂದ ಎಷ್ಟು ಹಣ ವಸೂಲಿಯಾಗುತ್ತದೆಂಬುದನ್ನು ಮಾನ್ಯ ಮಂತ್ರಿಗಳು ಈ ಸದನಕ್ಕೆ ತಿಳಿಸಬೇಕಾಗುತ್ತದೆ. ತಾವು ಅಧಿಕಾರಕ್ಕೆ ಬಂದ ಮೇಲೆ ನೀರಿನ ಮೇಲೆ ಕೂಡ ಟ್ಯಾಕ್ಸ್ ಹಾಕುತ್ತಿದ್ದೀರಿ. ಆ ಬಗ್ಗೆ ಕೂಡ ನಾವು ಮಾತನಾಡ ಬೇಕಾಗಿದೆ, ಇದರ ಜೊತೆಗೆ ನಾನಾ ರೀತಿಯ ತೆರಿಗೆಗಳನ್ನು ಹಾಕಿದ್ದೀರಿ. ಆಕ್ಟ್ರಾಯ್ ರದ್ದಾದ ಮೇಲೆ ತಾವು ಪುರಸಭೆಗಳಿಗೆ ಯಾವ ರೀತಿ ಪರಿಹಾರ ಹಣ ಕೊಡುತ್ತಿದ್ದೀರಿ ಇವೆಲ್ಲಾ ನಮಗೆ ತಿಳಿದಿದೆ ಆದ್ದರಿಂದ ಈಗ ತಾವು ಏನು ಬಿಲ್ಲು ತಂದಿದ್ದೀರಿ ಆ ಬಗ್ಗೆ ಫೈನಾನ್ಸಿಯಲ್ ಮೆಮೋರಂಡಮ್ ಕೊಡಬೇಕಾಗುತ್ತದೆ. ಮೊನ್ನೆಯ ದಿವಸ ತಾವು ಮಾತನಾಡುತ್ತಾ ಫೈನಾನ್ಸಿಯಲ್ ಮೆಮೊರಂಡಮ್ ಕೊಡುತ್ತೇನೆ ಎಂದು ಹೇಳಿದ್ದೀರಿ. ಆದರೂ ಸಹ ಇವತ್ತು ಫೈನಾನ್ಸಿಯಲ್ ಮೆಮೊರಂಡಮ್ ಕೊಟ್ಟಿಲ್ಲ. ಆದ್ದರಿಂದಲೇ ಮಾನ್ಯ ಸದಸ್ಯರು ಈ ಮನೆಯನ್ನು ತಪ್ಪು ದಾರಿಗೆ ಎಳೆಯುತ್ತಿದ್ದೀರಿ ಎಂದು ಹೇಳಿದ್ದು. ತಾವು ಪ್ರೊಫೆಸರ್ ಇದ್ದೀರಿ. ನಿಮಗೆ ಏನಿದ್ದರೂ ಅಧಿಕಾರಿಗಳು ಹೇಳಿದ್ದೆ ಸರಿ ನಾವು ಹೇಳಿದ್ದು ಸರಿ ಎಂದು ಕಾಣುವುದಿಲ್ಲ. ಅಧಿಕಾರಿಗಳ ಮೇಲೆ ತಮಗೆ ತುಂಬಾ ಪ್ರೀತಿ. ಅಧಿಕಾರಿಗಳು ಏನು ಕೊಡುತ್ತಾರೋ ಅದನ್ನೇ ತಾವು ಸಹ ಪ್ರತಿಪಾದನೆ ಮಾಡುತ್ತೀರಿ. ಅದು ಸರಿಯಲ್ಲ. ತಾವು ಈ ತಿದ್ದು ಪಡಿಗೆ ಸಂಬಂಧಪಟ್ಟಂತೆ ಫೈನಾನ್ಸಿಯಲ್ ಮೆಮೊರಂಡಮ್ ಕೊಡಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ತಾವು ಮಹತ್ವದ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ ತಾವು ಮಹತ್ವದ ವಿಷಯವನ್ನು ಪ್ರಸ್ತಾಪ ಮಾಡಿರುವಾಗ ನಾನು ಕೂಡ ಅದಕ್ಕೆ ಸಮಂಜಸವಾದ ಉತ್ತರವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ತಾವು ಬಳಸಿದ ಭಾಷೆ ಯಾವುದೆಂದರೆ ಮೋಸ ಮಾಡಿದ್ದೀರಿ, ಚೀಟ್ ಮಾಡಿದ್ದೀರಿ ಎಂದು ಮಾತನಾಡಿದಿರಿ. ನಾನು ಸುಮಾರು ೨೨೫ ಜನ ಮಾನ್ಯ ಸದಸ್ಯರಿರುವ ಈ ಮಹಾಸಭೆಗೆ ಮೋಸ ಮಾಡುವುದಕ್ಕೆ ಸಾಧ್ಯವಿಲ್ಲ. ಅವರ ಕಣ್ಣಿಗೆ ಕಾಣದೆ ಇರುವಂತಹ ಅಗೋಚರವಾದಂಥ ವಸ್ತುವನ್ನು ತಂದು ಇಟ್ಟು ಈ ಮಹಾ ಸಭೆಯಲ್ಲಿರತಕ್ಕಂಥ ಸದಸ್ಯರಿಗೆ ಎಂಚಿಸಿ ನಾನು ತೆಗೆದುಕೊಂಡು ಹೋಗತಕ್ಕಂಥದ್ದು ಏನೂ ಇಲ್ಲ. ಪತಕ್ಕೆ ಅಂತಹ ಶಬ್ದಗಳನ್ನು ಮಾನ್ಯ ಸದಸ್ಯರು ಬಳಸುತ್ತಾರೋ ನನಗೆ ಅರ್ಥವಾಗುವುದಿಲ್ಲ. ನಾನು ಏನಾದರೂ ಮಾತನಾಡಿದರೆ ನಾನು ಕೋಪ ಮಾಡಿಕೊಳ್ಳುತ್ತೇನೆಂದು ಅವರು ನನಗೆ ಹೇಳುತ್ತಾರೆ. ಕೋಪ ಮಾಡಿಕೊಳ್ಳುವವರು ಅವರೇ ಆಗಾಗ ಎದ್ದೆದ್ದು ಮಾತನಾಡುವವರು ಅವರೇ, ನಾನು ಸುಮ್ಮನೆ ಕುಳಿತುಕೊಂಡಿದ್ದರೂ ಸಹ ನಿನ್ನೆಯ ದಿವಸ ಮಾನ್ಯ ಸದಸ್ಯರಾದಂಥ ಶ್ರೀವಾನ್ ಕೃಷ್ಣನ್‌ರವರು ತಾವು ಏನು ಹೇಳಿದರೂ ಸುಮ್ಮನೆ ಕುಳಿತುಕೊಂಡಿದ್ದೀರಿ ಎಂದು ಹೇಳಿದರು. ಆದ್ದೆಲ್ಲ ಇರಲಿ. ಈಗ ಇಲ್ಲಿ ಎರಡು ವಾದವನ್ನು ಇಟ್ಟುಕೊಂಡು ಮಾನ್ಯ ಸದಸ್ಯರು ವಾದ ಮಾಡುತ್ತಿದ್ದಾರೆ.....

ಶ್ರೀ ಎಂ.ಎಸ್. ಕೃಷ್ಣನ್.—ತಾವು ಹಿಂದೆ ಇಲ್ಲಿ ಕುಳಿತುಕೊಂಡಿದ್ದಾಗ ಬಳಸಿದಂಥ ಪದಗಳು ಯಾವ ರೀತಿ ಇವೆ ಎನ್ನುವುದನ್ನು ಪ್ರೊಸಿಡಿಂಗ್ಸ್ ತರಿಸಿ ನೋಡಿ. ಆಗ ತಮಗೆ ಗೊತ್ತಾಗುತ್ತದೆ. ತಾವು ಈಗ ಅಲ್ಲಿಗೆ ಹೋದಮೇಲೆ ಏಕೋ ಸ್ವಲ್ಪ ಸಾಫ್ಟ್ ಆಗಿದ್ದೀರಿ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ, ತಾವು ಏನಾದರೂ ಇದ್ದರೆ ಆಮೇಲೆ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳ ಮನಸ್ಸಿಗೆ ಚೀಟ್ ಮತ್ತು ಮೋಸ ಎನ್ನುವುದು ಸರಿಯಲ್ಲವೆಂದು ಕಂಡು ಬಂದರೆ ಆ ಪದಗಳಿಗೆ ಬೇರೆ ಯಾವುದಾದರೂ ಪರ್ಯಾಯ ಪದಗಳು ಇದ್ದರೆ ಅವರೇ ಹೇಳಿಕೊಡಲಿ. ಮೋಸ ನಡೆಯದಿದ್ದರೆ ಸಾಕು. ಆದರೆ ಮೋಸ ಎನ್ನುವ ಪದಕ್ಕೆ ತಾವು ಬೇರೆ ಪದ ಯಾವುದಾದರೂ ಹೇಳಿಕೊಟ್ಟರೆ ಅದೇ ಪದವನ್ನು ನಾವು ಪ್ರಯೋಗ ಮಾಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ಇಲ್ಲಿ ಚೀಟ್ ಇಲ್ಲ, ಮೋಸ ಇಲ್ಲ, ಚೀಟಿಂಗ್ ಇಲ್ಲ ಜಿಟ್ರೇಯಲ್ ಇಲ್ಲ. ನೀವು ಮಾತನಾಡಿದಂಥ ಪದಗಳನ್ನು ಉಪಯೋಗಿಸಿ ನಾನೂ ಸಹ ಮಾತನಾಡ ಬಹುದು, ನನಗೂ ಕೂಡ ಅಂತಹ ಪದಗಳನ್ನು ಉಪಯೋಗಿಸಿ ಮಾತನಾಡುವುದು ನನಗೂ ಬರುತ್ತದೆ.

ನಿಮ್ಮ ಕಡೆಯವರು ಮಾತನಾಡಿದ ರೀತಿಯಲ್ಲಿ ನಮ್ಮ ಕಡೆಯ ಮಾನ್ಯ ಸದಸ್ಯರು ಮಾತನಾಡುವಂತೆ ತಯಾರು ಮಾಡಬೇಕಾಗುತ್ತದೆ. ಯಾವುದಾದರೂ ವಾಕ್ಯಗಳನ್ನು ಮಾತನಾಡುವಾಗ ಅಂತಹ ಶಬ್ದಗಳನ್ನು ಉಪಯೋಗ ಮಾಡಿದರೆ ನಾವು ಏನು ಮಾಡಬೇಕು ಹೇಳಿ ? .....

ಶ್ರೀ ಎಸ್. ಬಂಗಾರಪ್ಪ,—ಹಾಗಾದರೆ ನಿಮ್ಮ ಕಡೆಯ ಮಾನ್ಯ ಸದಸ್ಯರನ್ನು ಸಹ ತಯಾರು ಮಾಡಿ ಇಲ್ಲಿ ಬಿಟ್ಟರೆ ಅವರು ಯಾವ ರೀತಿ ಪ್ರದರ್ಶನ ಮಾಡುತ್ತಾರೋ ಆದನ್ನು ನಾವು ಸಹ ನೋಡಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ತಮ್ಮ ಸಲಹೆಯನ್ನು ಖಂಡಿತವಾಗಿ ನಾನು ಪರಿಶೀಲನೆ ಮಾಡುತ್ತೇನೆ.....

ಶ್ರೀ ಎಸ್. ಬಂಗಾರಪ್ಪ.—ತಾವು ನಿಮ್ಮ ಕಡೆಯ ಮಾನ್ಯ ಸದಸ್ಯರನ್ನು ತಯಾರು ಮಾಡಿ ಬಿಡಿ ಯಾವ ರೀತಿ ಪ್ರದರ್ಶನ ಮಾಡುತ್ತಾರೋ ನೋಡೋಣ.....

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಈಗ ಮಾನ್ಯ ಸದಸ್ಯರು ಎರಡು ವಿಧವಾದಂಥ ವಾದವನ್ನಿಟ್ಟು ತಕರಾರು ಎತ್ತಿದ್ದಾರೆ. ಮೊದಲನೆಯದು ಏನೆಂದರೆ ಸೆಸ್ ಹಾಕುತ್ತಿದ್ದೀರಿ ಅದಕ್ಕೆ ಸಂಬಂಧ ಪಟ್ಟಂತೆ ಫೈನಾನ್ಸಿಯಲ್ ಮೆಮೊರಂಡಮ್ ಕೊಡಬೇಕಾಗುತ್ತದೆಂದು ಎರಡನೆಯದಾಗಿ ಲೀಗಲ್ ಸೆಲ್ ಮಾಡುತ್ತಿದ್ದೀರಿ ಅದಕ್ಕೆ ಹಣ ಖರ್ಚಾಗುವುದಿಲ್ಲವೇ ಎಂದು. ಈ ಎರಡು ಕಾರಣಗಳನ್ನು ಅವರು ಮಂಡಿಸಿದ್ದಾರೆ. ಈ ಬಗ್ಗೆ ಮಾನ್ಯ ಸದಸ್ಯರಾದಂಥ ವೀರಪ್ಪ ಪೊಯಿಲಿಯವರು ಕೌಲ್ ಆಂಡ್ ಶಕ್ದರ್ ಪುಸ್ತಕವನ್ನು ಓದಿ ವಿವರಣಾತ್ಮಕವಾದಂಥ ವಿಷಯಗಳನ್ನು ಹೇಳಿದ್ದೇನೂ ಇಲ್ಲ. ಮೊದಲನೆಯವಾದಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ನಿಯಮ ೧೯೭(೨)ರ ಪ್ರಕಾರ ಇದು ಮನಿ ಬಿಲ್ ಆಗುವುದಿಲ್ಲ. ಆದ್ದರಿಂದ ಇದಕ್ಕೆ ಫೈನಾನ್ಸಿಯಲ್ ಮೆಮೊರಂಡಮ್ ಕೊಡಬೇಕಾಗಿಲ್ಲ.ಈ ಬಗ್ಗೆ ಮಾನ್ಯ ಅಧ್ಯಕ್ಷರೇ ತೀರ್ಪು ಕೊಡಬೇಕು. ಇಷ್ಟಕ್ಕಂಥ ವಿಚಾರವನ್ನು ನಾನು ತಮ್ಮ ಮುಂದೆ ಇಟ್ಟಿದ್ದೇನೆ. ಎರಡನೆಯದಾಗಿ ಲೀಗಲ್ ಸೆಲ್ ಬಗ್ಗೆ ವಿವರಣೆಯನ್ನು ಕೇಳಿದ್ದರು. ಆ ಬಗ್ಗೆ ಕೊಟ್ಟಿದ್ದೇನೆ. ಈ ಬಗ್ಗೆ ಇನ್ನೂ ಹೆಚ್ಚಿನ ಡಿಟೇಲ್ಸ್ ಕೊಡಿ ಎಂದು ಕೇಳುತ್ತಿದ್ದಾರೆ. ಇವತ್ತು ಆ ಡಿಟೇಲ್ಸ್‌ನ್ನು ಕೊಡುವುದಕ್ಕೆ ಆಗುವುದಿಲ್ಲ. Sub-clause 4 of Clause 13 of the Bill provides for creation of the Legal Cell in the Directorate of Municipal Administration. The composition and the strenth of the Legal Cell is yet to be determined by the rules. Some additional expenditure will be involed. It is not possible to finally determine them before the rules are framed. It is not capable of ascertainment even approximately. We have stated so in the financial memorandum. This is one step. Going a step further I would like to submit that every item of expenditure will have to be granted by this House. What is necessary by means of a financial memorandum at the time of consideration of the Legislative enactment is that the Members must know when the bill comes into existence would be the probable expenditure involved in order to implement that piece of Legislation. Some times it is capable of ascertainment, sometimes it is capable of ascertainment provisionally and sometimes it is not possible to ascertain exactly in advance. But all the same, we have stated so in the Memorandum now placed before this House . That is not capable of ascertainment before the rules are framed, because the rules will have to indicate number of persons and nature of the work that has got to be turned out by the Legal Cell. All that will be considered only when the rules are framed. Since rules are not framed the expenditure involved is not capable of ascertainment even approximately. If any financial memorandum

is not attached to the bill and later at the consideration stage if the Speaker holds that one is necessary the financial memorandum has been permitted to be read out by the Minister in the House and in exceptional cases the rule regarding financial memorandum has been suspended in its application to the introduction of the bill ಅನೇಕ ಫೈನಾನ್ಸಿಯಲ್ಸ್ ಮೆಮೋರಂಡಮ್‌ಗಳಲ್ಲಿ ನಾವು ಡಿಟೇಲ್ಸ್ ಕೊಟ್ಟಿದ್ದೇವೆ. All facts are placed before this House.

Sri K.H. Patil.—I am on a point of Order.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಏನು ಹೇಳುತ್ತಾರೋ ಅದು ಮುಗಿಯಲಿ.

Sri K. H. Patil.—I am not speaking. I am on a point of Order. When the point of Order is raised from a corner of the House the Minister must resume his seat. The Hon. Minister who is considered to be Law Minister and who is also considered to be one of the senior members of the Bar has made out a case that financial bill has been brought here. He has admitted that the memorandum is necessary. He was pleading earlier that it was not necessary. But, after hearing the Opposition he has been please- to admit that the financial bill is a necessity and he has brought the financial bill before the house Now, Sir, this House is not only representing ourselves, but it represents four crores of people. When the financial bill is obligatory it should contain the financial memorandum. Is it a financial memorandum according to the wisdom of the Speaker ? If this is accepted by this House, then the whole procedure of preparing the law and everything will go. Financial bill must be prepared along with the act and it must be supplied to the Members before introduction. That is not done here. Hon. Minister urged this House that financial memorandum can not be given in particular regarding income and expenditure of the proposed cell to be constituted that is absolutely wrong. Before bringing out this Bill he must have pulled up his officers to submit to him what is the anticipated expenditure and what is the anicipated income, whether it will bring better results to the state and whether it brings better results to the people of the country. All these things he could have made, before bringing this Bill to this House. Therefore, he has totally failed and the failure of the Constitutional propriety cannot be rectified by suspending the rule of this House. It is not under the rule that the financial memorandum is required, but financial memorandum is required under the Constitution of India and therefore, it is obligatory duty on the part of the Government to appeared the official memorandum therefore, I appeal to him. He has to create a good and healthy precedent. He has brought to your notice that using unparliamentary language and all that is not necessary and that is not prudent. We appeal to him that if at all anything is added to the word cheating a proper word will be that the Hon.

Minister, though he has got the wisdom, has totally failed to bring to the kind notice of this House the correct anicipated figure. Therefore, Sir, it cannot be amended. It will have to be taken back, withdrawn brought back to this House. After suitable corrections.

೨-೩೦ ಪಿ.ಎಂ.

By rectifying, he will be free to answer, he can bring it tomorrow or day after for consideration before the House. Therefore, my humble appeal to you Sir, during your regime such an impropriety should not be created as precedent and Karnataka Legislature has been as you all aware has got tremendous respect all over the country and this respect should not go down by allowing such a thing. Nothing will damage and his Government will not come down if it is not accepted. The Hon'ble Minister can even bring it in the next session after complying with the rules of procedure. Therefore, I am appealing to Sri Lakshmisagar through you Sir to rectify the legal defect that he has got then present the bill before the House.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಬಹುಶಃ ಮಾನ್ಯ ಮಂತ್ರಿಗಳು ಇದಕ್ಕೆ ಮೊನ್ನೆ ಒಪ್ಪಿಕೊಂಡಿದ್ದರು. ಒಪ್ಪಿಕೊಂಡ ಮೇಲೆ ಪುನಃ ಮಾನ್ಯ ಪಾಟೀಲರು ಹೇಳಿದಂತೆ, ಪ್ರಿಂಟ್ ಮಾಡಿ, ಮೆಮೋರ್ಯಾಂಡಂನಲ್ಲಿ ಇಂಟ್ರಡ್ಯೂಸ್ ಮಾಡಬೇಕಾಗಿತ್ತು. ಫೈನಾನ್ಷಿಯಲ್ ಮೆಮೋರ್ಯಾಂಡಂ ಬೇಕಾಗಿಲ್ಲ, ಇದು ಬರುವುದಿಲ್ಲ, ಇದರ ಅವಶ್ಯಕತೆ ಇಲ್ಲವೆಂದು ಹಿಂದೆ ಹೇಳಿದ್ದರು. ಆದರೆ ಒಪ್ಪಿಕೊಂಡು ಇವತ್ತು ಪೇಪರ್ ಮೇಲೆ ಸೈಕ್ಲೋಸ್ಟೈಲ್ ಮಾಡಿ ಕಳುಹಿಸಿದ್ದಾರೆ. ವಿರೋಧ ಪಕ್ಷದವರು ಮೊನ್ನೆ ಹೇಳಿದ್ದನ್ನು ಒಪ್ಪಿಕೊಂಡು, ಮತ್ತೆ ಇದನ್ನು ತಂದಿದ್ದಾರೆ. ಸೆಕ್ಷನ್ ೯೪ ಏನಿದೆ, ಅದಕ್ಕೆ ೯೪(ಎ) ಎಂದು ಅಮೆಂಡ್‌ಮೆಂಟ್ ತರುತ್ತಿದ್ದಾರೆ. ೯೪(ಎ) ನಲ್ಲಿ ಏನಿದೆ,

> "Where a municipal council levies tax on buildings or lands under section 94, it shall, in addition, levy a water supply cess at the rate of ten percent of such tax for the maintenance and improvement of water supply schemes in urban areas and the cess so collected shall be credited to the Government. So, the cess collected will be credited to the Government not to the corporation."

ಅಂದರೆ ಈ ಹಣ ನೇರವಾಗಿ ಸರಕಾರದವರಿಗೆ ಕ್ರೆಡಿಟ್ ಮಾಡುತ್ತಿದ್ದಾರೆಯೇ ಹೊರತು ಕಾರ್ಪೊರೇಷನ್‌ಗೆ ಅಲ್ಲ. ಆದುದರಿಂದ ಫೈನಾಷಿಯಲ್ ಮೆಮೋರ್ಯಾಂಡಂನ ಅಗತ್ಯ ಇದೆ. ಇದಕ್ಕೆ ಎಷ್ಟು ದುಡ್ಡು ಬೇಕು ? ಎಷ್ಟು ಕಲೆಕ್ಷನ್ ಮಾಡಬೇಕು, ೧೦ ಪರ್ಸೆಂಟ್‌ನಂತೆ ಎಷ್ಟು ಕಲೆಕ್ಟ್ ಆಗುತ್ತದೆ, ಸರ್ಕಾರಕ್ಕೆ ಎಷ್ಟು ಕ್ರೆಡಿಟ್ ಆಗುತ್ತದೆ ಎಂಬುದು ಬೇಕು. ನೂರಾರು ಸ್ಕೀಮ್‌ಗಳು ಇವೆ. ಅವುಗಳ ಪೂರ್ಣ ವಿವರ ನಮಗೆ ಹಾಗೂ ಸದನಕ್ಕೆ ಗೊತ್ತಾಗಬೇಕು. ಹಿಂದೆ ಇದು ಬೇಕಾಗಿಲ್ಲವೆಂದು ಲೀಗಲ್ ಸೆಲ್ ಮತ್ತು ಡೈರಕ್ಟೊರೇಟ್ ಮಾಡುವುದಕ್ಕೆ ಹಣ ಬೇಕಾಗುತ್ತದೆಂದು ಒಪ್ಪಿಕೊಂಡಿದ್ದಿರಿ. ಸ್ವಲ್ಪ ಹಣ ಅದಕ್ಕೆ ಬೇಕಾಗುತ್ತದೆಂದು ಹೇಳಿದ್ದೀರಿ. ಇದೆಲ್ಲಾ ನಮಗೆ ಗೊತ್ತಾಗದೇ ಈ ಬಿಲ್ಲನ್ನು ಅಪ್ರೂವ್ ಮಾಡುವುದಕ್ಕೆ ಹೇಗೆ ಸಾಧ್ಯ ? ಆದಕ್ಕಾಗಿ ತಾವು ಇದನ್ನು ಪಾಪಸ್ ತೆಗೆದುಕೊಳ್ಳಿ. ಪಾಪಸ್ ತೆಗೆದುಕೊಂಡು, ಡೀಟೈಲ್ ಇನ್‌ಕಂ, ಎಕ್‌ಪೆಂಡೀಚರ್ ಎಷ್ಟು ಬೇಕಾಗುತ್ತದೆ ಎಂಬುದನ್ನು ತಿಳಿದುಕೊಂಡು, ಫೈನಾನ್ಷಿಯಲ್ ಮೆಮೋರ್ಯಾಂಡಂ ತನ್ನಿ.

ಶ್ರೀ ಎಸ್. ಬಂಗಾರಪ್ಪ.—ಮತ್ತೊಂದು ವಿಚಾರ. ಮಾನ್ಯ ಪಾಟೀಲರು ಮತ್ತು ಖರ್ಗೆಯವರೂ ಹೇಳಿದ್ದಾರೆ. ಎರಡು ವಿಷಯಗಳಲ್ಲಿ ಮಾನ್ಯ ಸಚಿವರೂ ಕೂಡ ಹೇಳಿದ್ದಾರೆ. ಎರಡು

ಒಂದು ಕ್ರಿಯೇಷನ್ ಆಫ್ ಲೀಗಲ್ ಸೆಲ್, ಇನ್ನೊಂದು ಸೆಸ್ ವಿಚಾರ. ಆವರ ಪ್ರಕಾರ, it is not a tax. ಆದರೆ taxation includes cess also. ಎಂಬುದು ನಮ್ಮ ಅಭಿಪ್ರಾಯ. ಎಷ್ಟು ಹಣ ಬರುತ್ತದೆ ಎಂಬುದನ್ನು ಯಾರೂ ಕೂಡ ಹೇಳುವುದಕ್ಕಾಗುವುದಿಲ್ಲ. ಈಗ ನೀವು ಸಪ್ಲೈ ಮಾಡಿರುವ ಫೈನಾನ್ಷಿಯಲ್ ಮೆಮೋರ್ಯಾಂಡಂ ಏನು ಹೇಳುತ್ತದೆ ? ಇದರಲ್ಲಿ ಸೆಸ್ ವಿಚಾರದಲ್ಲಿ ಏನ್ನೊಂದು ಮಾತನ್ನೂ ಕೂಡ ತಾವು ಹೇಳಿಲ್ಲ. ಈಗ ಇದರಿಂದ ಪ್ರಪಂಚ ಏನೂ ಮುಳುಗಿ ಹೋಗುವುದಿಲ್ಲ. ಆದ್ದರಿಂದ ನಮ್ಮ ಅನಿಸಿಕೆ, ಇದನ್ನು ವಾಪಸ್ ತೆಗೆದುಕೊಳ್ಳಿ. ಫೈನಾನ್ಷಿಯಲ್ ಮೆಮೋರ್ಯಾಂಡಮ್‌ನ್ನು ಬಿಲ್ ಪಾಸ್ ಮಾಡುವಾಗ, ಅಥವಾ ಕನ್‌ಸಿಡರೇಷನ್ ಮಾಡುವಾಗ, ಸರ್ಕ್ಯುಲೇಟ್ ಮಾಡುವುದಲ್ಲ. ಈಗ ಕಾಲ ಇನ್ನೂ ಮಿಂಚಿಲ್ಲ. ಇದನ್ನೆಲ್ಲಾ ತಯಾರು ಮಾಡಿಕೊಂಡು ಸದನದ ಮುಂದೆ ಇಡಿ. ತಮ್ಮ ಕಾಲದಲ್ಲಿ ಇಂಥಾದ್ದು ಆಗಬಾರದು. ಮಾನ್ಯ ಸಭಾಧ್ಯಕ್ಷರೇ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದನ್ನು ವಾಪಸ್ ತೆಗೆದು ಕೊಂಡು ಲೀಗಲ್ ಸೆಲ್ ಮತ್ತು ಸೆಸ್ ವಿಚಾರದಲ್ಲಿ ಫೈನಾನ್ಷಿಯಲ್ ಮೆಮೋರ್ಯಾಂಡಂ ಅಟ್ಯಾಚ್ ಮಾಡಿ ಸದನದ ಮುಂದೆ ಇಡಿ.

MR. SPEAKER.—I will keep my ruling reserved. ಬೇರೆ ಬಿಲ್ ತೆಗೆದುಕೊಳ್ಳಿ.

೧೯೮೬ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು, ಸಂಸದೀಯ ವ್ಯವಹಾರ, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಕ್ಟ್ ಹಲವಾರು ಸಲ ತಿದ್ದುಪಡಿಯಾಗಿದೆ. ಹಿಂದೆ ಆದ ತಿದ್ದುಪಡಿ ಸಮಯದಿಂದ, ಈ ವರ್ಷ ಕಳೆದ ಕಾರಣ, ಹಣಕಾಸು ಖರ್ಚು ಮಾಡತಕ್ಕಂಥ ವಿಚಾರದಲ್ಲಿ ಹೆಚ್ಚಿನ ಅಧಿಕಾರವನ್ನು ಕೊಡತಕ್ಕ ಒಂದು ತಿದ್ದುಪಡಿಯನ್ನು ಇದರಲ್ಲಿ ಸೂಚಿಸಿದ್ದೇವೆ. ಇದನ್ನು ಸೆಕ್ಷನ್ ೧೦ರಲ್ಲಿ ತೋರಿಸಿದ್ದೇವೆ. ಆಮೇಲೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಬೆಂಗಳೂರು ನಗರದ ಕಮಿಷನರ್ ಅವರನ್ನು ಎಕ್ಸ್‌ಆಫಿಷಿಯೋ ಸದಸ್ಯರನ್ನಾಗಿ ಮಾಡಬೇಕೆಂದು ಸೂಚನೆ ಇದೆ. ಹೆಲ್ತ್ ಡಿಪಾರ್ಟ್‌ಮೆಂಟ್ ಅಧಿಕಾರಿ ಬದಲು ಬೆಂಗಳೂರು ಕಾರ್ಪೊರೇಷನ್ ಕಮೀಷನರವರನ್ನು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆಂದು ಸೂಚಿಸಿದೆ. ಈಗಿರತಕ್ಕಂಥ ಬಿ.ಡಿ.ಎ. ಆಕ್ಟ್ ಪ್ರಕಾರ ಇವರು ಯಾವ ವಿಧವಾದ ಉಸ್ತುವಾರಿ ನೋಡಿಕೊಳ್ಳತಕ್ಕ ಅಧಿಕಾರ ಇರಲಿಲ್ಲ. ಆದ್ದರಿಂದ ಒಂದೊಂದು ಸಲ ಅವರು ಮಾಡತಕ್ಕಂಥ ನಿರ್ಣಯಗಳು ಕಾನೂನಿಗೆ ವಿರುದ್ಧವಾಗಿದ್ದರೂ ಅವುಗಳನ್ನು ಜಾರಿಗೆ ತರತಕ್ಕ ಪ್ರಸಂಗಗಳು ಬರುತ್ತವೆ. ಈ ದಿಸೆಯಲ್ಲಿ ಹೈಕೋರ್ಟ್ ತೀರ್ಮಾನಗಳು ಆಗಿರುತ್ತವೆ ಅಥವಾ ಬೇರೆ ಸಮಯದಲ್ಲಿ ಆಗುತ್ತವೆ. ಇನ್ನು ಮುಂದೆ ಈ ತಿದ್ದುಪಡಿ ಪ್ರಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿರ್ಣಯ ಮಾಡತಕ್ಕ ಎಲ್ಲಾ ನಿರ್ಣಯಗಳನ್ನೂ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ಇದರಲ್ಲಿ ಸೂಚನೆ ಮಾಡಿದ್ದೇವೆ. ಆಮೇಲೆ ಕೊನೆಯದು " ಕಾಫೀಸ್ ಆಫ್ ರೆಸಲ್ಯೂಷನ್ " ಕೂಡ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ಸೂಚನೆ ಮಾಡಿದ್ದೇವೆ. ಮಿಕ್ಕವು ಇದಕ್ಕೆ ಸಂಬಂಧಪಟ್ಟ ತಿದ್ದುಪಡಿಗಳು ಮುಖ್ಯವಾದ ವಿಷಯಗಳು ಇಷ್ಟು. ಕಾಲಗತಿಯ ಹಿನ್ನೆಲೆಯಲ್ಲಿ ಮತ್ತು ಅನುಭವದ ಹಿನ್ನೆಲೆಯಲ್ಲಿ ಈ ತಿದ್ದುಪಡಿಗಳನ್ನು ಯೋಚನೆ ಮಾಡಿದ್ದೇವೆ. ಮಾನ್ಯಸಭೆ ಇದಕ್ಕೆ ತನ್ನ ಒಪ್ಪಿಗೆಯನ್ನು ಕೊಡ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.